Get Printed Study Notes for UPSC Exams - www.iasexamportal.com/notes



# ಕನ್ನಡ / KANNADA

## (ಕಡ್ಡಾಯ ಪತ್ರಿಕೆ) / (COMPULSORY)

| | |
|---|---|
| ವೇಳೆ : ಮೂರು ಗಂಟೆ<br>Time Allowed : **Three Hours** | ಗರಿಷ್ಠ ಅಂಕಗಳು : **300**<br>Maximum Marks : **300** |

### ಪ್ರಶ್ನೆ ಪತ್ರಿಕೆ ನಿರ್ದಿಷ್ಟ ಸೂಚನೆಗಳು

**ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಎಚ್ಚರಿಕೆಯಿಂದ ಓದಿರಿ :**

ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಬೇಕು.

ಪ್ರಶ್ನೆ/ಪ್ರಶ್ನೆಯ ಭಾಗಗಳಿಗೆ ಅನ್ವಯವಾಗುವ ಅಂಶಗಳನ್ನು ಅವುಗಳ ಎದುರಿಗೆ ಕೊಡಲಾಗಿದೆ.

ಉತ್ತರಗಳನ್ನು ಪ್ರಶ್ನೆಯಲ್ಲಿ ಸೂಚಿಸದ ಹೊರತು, **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಎಲ್ಲೆಲ್ಲಿ ಪ್ರಶ್ನೆಗಳಲ್ಲಿ ಪದಗಳ ಮಿತಿಯನ್ನು ಸೂಚಿಸಲಾಗಿದೆಯೋ ಆ ಸೂಚನೆಯನ್ನು ಪಾಲಿಸಬೇಕು. ಪದಗಳ ಮಿತಿ ಸೂಚಿಸಿದ್ದಕ್ಕಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಡಿತಗೊಳಿಸಲಾಗುವುದು.

ಯಾವುದಾದರೂ ಪುಟ ಅಥವಾ ಪುಟದ ಭಾಗವನ್ನು ಪ್ರಶ್ನೆ ಸಹಿತವಾದ ಉತ್ತರ ಪತ್ರಿಕೆಯಲ್ಲಿ ಖಾಲಿ ಬಿಟ್ಟಲ್ಲಿ, ಆ ಜಾಗವನ್ನು ಸ್ಪಷ್ಟವಾಗಿ ಪೆನ್ನಿನಿಂದ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*All questions are to be attempted.*

*The number of marks carried by a question / part is indicated against it.*

*Answers must be written in **KANNADA (Kannada script)** unless otherwise directed in the question.*

*Word limit in questions, wherever specified, should be adhered to and if answered in much longer or shorter than the prescribed length, marks may be deducted.*

*Any page or portion of the page left blank in the Question-cum-Answer Booklet must be clearly struck off.*





Get Printed Study Notes for UPSC Exams - www.iasexamportal.com/notes

**Q1. ಕೆಳಕಂಡ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳ ಮಿತಿಯೊಳಗೆ ಪ್ರಬಂಧ ಬರೆಯಿರಿ :** *100*

(a) ಭಾರತದಲ್ಲಿನ ಆರೋಗ್ಯ-ರಕ್ಷಣಾ ವಿಧಾನಗಳು

(b) ಭಾರತದ ರೈತ ವಿಧಾಯಕದ ಪ್ರಸ್ತುತತೆ, 2020

(c) ರಾಷ್ಟ್ರೀಯ ಶಿಕ್ಷಣ ನೀತಿಯ (NEP) ಸವಾಲುಗಳು, 2020

(d) ಇಂದಿನ ಕೃತಕ ಬುದ್ಧಿಮತ್ತೆಯ ಪ್ರಯೋಜನಗಳು

**Q2. ಈ ಗದ್ಯ ಪತ್ಯವನ್ನು ಓದಿ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ನಿಮ್ಮದೇ ಭಾಷೆಯಲ್ಲಿ ಉತ್ತರಿಸಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಸರಳ ಮತ್ತು ಸಂಕ್ಷಿಪ್ತವಾಗಿರಲಿ :** *12×5=60*

ಬದುಕು ಮತ್ತು ಪರಿಸರಗಳು ಗಾಢವಾದ ಸಂಬಂಧ ಹೊಂದಿವೆ. ಎಲ್ಲಾ ಜೀವಂತ ಪ್ರಾಣಿಗಳೂ ಪರಿಸರವನ್ನು ಗಾಢವಾಗಿ ಅವಲಂಭಿಸಿವೆ. ಆದುದರಿಂದ ನಮ್ಮ ಮನಸ್ಸು, ಶರೀರ, ಸಾಮರ್ಥ್ಯಗಳು, ಶಕ್ತಿ ಮತ್ತು ಅವುಗಳದೇ ಆದ ಗುಣಗಳು ರೂಪುಗೊಂಡು, ಅವು ಪರಿಸರದಿಂದ ಅಭಿವೃದ್ಧಿಗೊಂಡು, ರೂಪ ಪಡೆಯುತ್ತವೆ. ಬದುಕು ಮತ್ತು ಪರಿಸರಗಳು ಆತ್ಮೀಯ ಸಂಬಂಧ ಹೊಂದಿದ್ದು ಅವೆರಡರ ಸಹ-ಅಸ್ತಿತ್ವಕ್ಕೆ ಪರಿಸರ ಅತ್ಯಾವಶ್ಯಕ.

ಪರಿಸರ, ಮನುಷ್ಯ ಜೀವಿಗಳನ್ನು ರಕ್ಷಿಸಿ ಕಾಪಾಡುವ ರಕ್ಷಾಕವಚವಾಗಿ ಪ್ರಕೃತಿ ನೀಡಿರುವ ಒಂದು ಉಡುಗೊರೆ. ಪರಿಸರದ ಮೂಲವನ್ನು ಪ್ರಕೃತಿಯಲ್ಲಿ ಹುಡುಕಬಹುದು. ಪ್ರಕೃತಿಯು ಭೂಮಿ, ಕಾಡುಗಳು, ಪರ್ವತಗಳು, ನದಿಗಳು, ಚಿಲುಮೆಗಳು, ಮರುಭೂಮಿಗಳು, ಮುಕ್ತ ಬಯಲುಗಳು, ಮತ್ತು ಗ್ರಾಮಗಳು, ವರ್ಣರಂಜಿತ ಪ್ರಾಣಿಗಳು ಮತ್ತು ಪಕ್ಷಿಗಳು, ಶುದ್ಧ ನೀರಿನಿಂದ ಕೂಡಿರುವ ಝರಿಗಳನ್ನು ಯಥೇಚ್ಛವಾಗಿ ಹೊಂದಿದೆ. ಇವೆಲ್ಲವುಗಳೊಂದಿಗೆ ಪರಿಮಳ ಭರಿತ ತಂಗಾಳಿ, ಜೀವಕ್ಕೆ ಮುದನೀಡುವ ಹನಿಗಳು ಇವೆಲ್ಲವೂ ಪ್ರಕೃತಿಯ ಭಾಗಗಳು. ಪ್ರಕೃತಿಯ ಈ ಎಲ್ಲ ಗುಣಗಳು ಮನುಷ್ಯನಿಗೆ ಶಾಂತಿ ಮತ್ತು ಸುಖಜೀವನ ನೀಡಲು ತುಲನಾತ್ಮಕ ಪರಿಸರ ನಿರ್ಮಾಡಲು ಸಹಕರಿಸುತ್ತವೆ. ಆದರೆ ಈ ಪ್ರಕೃತಿಯಲ್ಲಿನ ಪರಿಸರವು ಅತ್ಯಂತ ವೇಗವಾಗಿ ಹಾಳಾಗುತ್ತಿದೆ. ಮನುಷ್ಯನು ಪ್ರಕೃತಿಯ ಕೊಡುಗೆಗಳನ್ನು



Download FREE UPSC E-BOOKS FREE! CLICK HERE

Get Printed Study Notes for UPSC Exams - www.iasexamportal.com/notes

ಆಲೋಚಿಸದೆ ಶೋಧಿಸುತ್ತಿರುವುದು ಅತ್ಯಂತ ಆಶ್ಚರ್ಯಕರ, ಇದರಿಂದ ಸಂಪೂರ್ಣವಾಗಿ ಪರಿಸರದ ವಿನಾಶವಾಗುತ್ತಿದೆ. ನೂರಾರು ವರ್ಷಗಳ ಹಿಂದಿನ ಮಂಜಿನಯುಗ, ಮರಳಬಹುದು ಅಥವಾ ಧ್ರುವಗಳಲ್ಲಿನ ಮಂದವಾದ ಮಂಜಿನ ಪದರಗಳು ಕರಗಿ ವಿನಾಶಕಾರಿ ಅಲೆಗಳನ್ನು ಸೃಷ್ಟಿಸಿ ಅವು ನಗರ, ಕಾಡು, ಪರ್ವತ, ಪ್ರಾಣಿ ಮತ್ತು ಕೀಟಗಳನ್ನು ನುಂಗಿ ಹಾಕುವ ದಿನಗಳು ದೂರವಿಲ್ಲ.

ಖಂಡಿತವಾಗಿ ಪರಿಸರ ಮಾಲಿನ್ಯತೆ ಮತ್ತು ಅಸಮತೋಲನಗಳು ನಮ್ಮದೇ ಕೆಟ್ಟ ನಡುವಳಿಕೆಗಳ ಮತ್ತು ಕ್ರಿಯೆಗಳ ಫಲಿತಾಂಶವಾಗಿರುತ್ತದೆ. ಈ ಅಸಮತೋಲನದಿಂದ, ಭೂಮಿ, ಗಾಳಿ, ನೀರು, ಶಬ್ದಮಾಲಿನ್ಯಗಳು ಸೃಷ್ಟಿಯಾಗಿವೆ. ಪರಿಸರ-ಮಾಲಿನ್ಯವು ಉಸಿರಾಟದ ತೊಂದರೆ, ಹೃದಯ ಮತ್ತು ಜಠರ ಖಾಯಿಲೆ, ದೃಶ್ಯ ಮತ್ತು ಶ್ರವಣಶಕ್ತಿಗಳನಾಶ, ಮಾನಸಿಕ ಒತ್ತಡ ಮತ್ತು ಇತರೆ ಒತ್ತಡ ಸಂಬಂದಿತ ಖಾಯಿಲೆಗಳಿಗೆ ದಾರಿಮಾಡಿಕೊಡುತ್ತದೆ. ಮನುಷ್ಯರು ಭೂಮಿಯ ಮೇಲೆ ಬದುಕುಳಿಯಬೇಕಾದರೆ, ಪರಿಸರದ ಸಮತೋಲನ ಅವಶ್ಯಕ ಎಂಬುದನ್ನು ನಾವೆಲ್ಲ ಬಲ್ಲೆವು. ಭೂಮಿ ಸಂಪೂರ್ಣವಾಗಿ ಸಸ್ಯ ಸಂಪತ್ತಿನಿಂದ ಆವೃತವಾಗದಿರಲು ಸರಿಸಮನಾದ ಸಸ್ಯಾಹಾರಿ ಪ್ರಾಣಿಗಳಿವೆ. ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆಯನ್ನು ನಿಯಂತ್ರಿಸಲು ಮಾಂಸಾಹಾರಿ ಪ್ರಾಣಿಗಳಿವೆ. ಒಂದು ಸಮತೋಲನ ಅಸ್ತಿತ್ವದಲ್ಲಿದೆ. ಇದರಿಂದ ಈ ಮೂರೂ ಸರಿ ಸಮತೋಲನದಲ್ಲಿ ನಿಯಂತ್ರಿತವಾಗಿವೆ ವೈಜ್ಞಾನಿಕ ಅನ್ವೇಷಣೆಗಳೊಂದಿಗೆ ಆಧುನಿಕ ಯುಗದ ಬರುವಿಕೆಯೊಂದಿಗೆ, ಕಾರ್ಖಾನೆ ಉದ್ಯೋಗಗಳು, ಅಭಿವೃದ್ಧಿ ಮತ್ತು ವಿಸ್ತರಣೆಯೊಂದಿಗೆ ಜನಸಂಖ್ಯಾ ಸ್ಫೋಟವೂ ಆಗಿದೆ.

(a) 'ಬದುಕು ಮತ್ತು ಪರಿಸರ ಗಾಢ ಸಂಬಂಧಹೊಂದಿದೆ' ಎಂಬುದನ್ನು ಚರ್ಚಿಸಿ. *12*

(b) ಪ್ರಕೃತಿ ಮತ್ತು ಪರಿಸರದ ನಡುವಿನ ಸಂಬಂಧ ಎಂತಹುದು ? *12*

(c) ಪ್ರಕೃತಿಯ ಸಮತೋಲನವು ಒಳ್ಳೆಯ ಪರಿಸರವನ್ನು ಹೇಗೆ ನಿರ್ಮಿಸುತ್ತದೆ ? *12*

(d) ಪರಿಸರದ ಅಸಮತೋಲನದಿಂದ ಉಂಟಾಗುವ ಅಪಾಯಗಳೇನು ? *12*

(e) ಪರಿಸರ ಮಾಲಿನ್ಯದಿಂದ ಯಾವ ಯಾವ ಖಾಯಿಲೆಗಳು ಬರುತ್ತವೆ ? *12*



Download FREE UPSC E-BOOKS FREE! CLICK HERE

Get Printed Study Notes for UPSC Exams - www.iasexamportal.com/notes

**Q3.** **ಕೆಳಕಂಡ ಪಠ್ಯವನ್ನು ಅದರ ಮೂರನೆಯ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ನಿಮ್ಮದೇ ಆದ ಪದಗಳಲ್ಲಿ ಬರೆಯಿರಿ. ತಲೆಬರಹ ಕೊಡುವ ಅಗತ್ಯ ಇಲ್ಲ :** ***60***

ಇಂಡಿಯಾ ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯ ಒಂದೇ ಚಿತ್ರದ (ನಾಣ್ಯದ) ಎರಡು ಮುಖಗಳು, ನಮ್ಮ ಕೈಗಳಿಂದ ಐಕ್ಯತೆಯು ಜಾರಿಹೋದರೆ ಆಗ ಇಂಡಿಯಾದ ಸ್ವಾತಂತ್ರ್ಯವೂ ತೆರೆದ ಬಾಗಿಲಿನಿಂದ ಕಾಣದಾಗುತ್ತದೆ. ಆದುದರಿಂದ ಇಂಡಿಯಾದ ಪ್ರತಿಯೊಬ್ಬರ ಕರ್ತವ್ಯವೇನೆಂದರೆ ದೇಶದ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುವುದಾಗಿದೆ. ಇಂಡಿಯಾದಲ್ಲಿ ರಾಷ್ಟ್ರೀಯ ಸಮಸ್ಯೆಗಳು ಭಾಷಿಕ ಸಮಸ್ಯೆಗಳಿಗಿಂತ ಪ್ರದಾನವಾದುವು. ನಮ್ಮ ದೇಶದ ಐಕ್ಯತೆಯನ್ನು ಕಾಪಾಡುವಲ್ಲಿ ನಾವೇನಾದರೂ ಅವಮಾನಿತರಾಗಬೇಕಾದರೆ ಅಂತಹ ಅವಮಾನವನ್ನು ಸ್ವೀಕರಿಸಲು ನಾವು ಸಿದ್ಧರಿರಬೇಕು. ನಮ್ಮ ದೇಶದ ಐಕ್ಯತೆಯನ್ನು ಕಾಪಾಡುವಲ್ಲಿ ನಾವೇನಾದರೂ ಅನ್ಯಾಯವನ್ನು ಎದುರಿಸಬೇಕಾದರೆ ಅದನ್ನು ಎದುರಿಸಲೂ ನಾವು ಸಿದ್ಧರಿರಬೇಕು. ಇವೆಲ್ಲವನ್ನೂ ಯಾಕೆ ಸಹಿಸಬೇಕೆಂದರೆ ಇಂಡಿಯಾ ದೇಶವು ಶಕ್ತಿಶಾಲಿ ಮತ್ತು ಸ್ಥಿರವಾಗಿರಲು, ಇದರಿಂದ ಯಾವುದೇ ಹೊರಗಿನ ಶಕ್ತಿ ಇದನ್ನು ಅಪಮಾನಿಸುವುದಿಲ್ಲ. ಇಂತಹ ಕ್ರಿಯೆಯಿಂದ ದೇಶದ ಒಂದು ಭಾಗವು ಮತ್ತೊಂದು ಭಾಗದೊಂದಿಗೆ ಅನ್ಯಾಯಯುತವಾಗಿ ವರ್ತಿಸಲು ಸಾಹಸ ಪಡುವುದಿಲ್ಲ. ಇಂದಿನ ನಮ್ಮ ಆರ್ಥಿಕತೆ ಸ್ಥಿರವಾಗಿದ್ದರೆ, ಆಂತರಿಕ ಕಲಹಗಳು ಮುಕ್ತಾಯಗೊಳ್ಳುತ್ತವೆ. ಆಂತರಿಕ ಕಲಹಗಳು ಉದ್ಭವಿಸಿದರೂ ಈ ಹಿಂದಿನಂತೆ ರಾಜ್ಯಗಳ ನಡುವೆ ಕಡಿ ಅನುಭವವಿರುವುದಿಲ್ಲ. ಆರ್ಥಿಕ ಅಭಿವೃದ್ಧಿಯು ಜನರ ನಡುವಳಿಕೆಗಳಲ್ಲಿ ಬದಲಾವಣೆ ತರುತ್ತದೆ.

ನಮ್ಮ ದೇಶದ ಐಕ್ಯತೆಯನ್ನು ಕಾಪಾಡುವುದರೊಂದಿಗೆ ನಮ್ಮ ಮತ್ತೊಂದು ಕರ್ತವ್ಯವೇನೆಂದರೆ ದೇಶವು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರೂಪಿಸಿದ್ದ ರಾಷ್ಟ್ರೀಯ ಭಾವನೆಯನ್ನು ಕಾಪಾಡುವುದು. ಭಾರತವು ತನ್ನ ಸ್ವಾತಂತ್ರ್ಯವನ್ನು ಪಡೆದು 73 ವರ್ಷಗಳು ಮುಗಿಯುತ್ತಿವೆ. ಆದರೆ ನಾವು ಇತರ ಹಲವು ಗುರಿಗಳನ್ನು ಸಾಧಿಸಬೇಕಿದೆ. ಸ್ವಾತಂತ್ರ್ಯವೆಂದರೆ ಸಾಕಷ್ಟು ಆಹಾರ ಹೊಂದಿರುವುದು, ಅಥವಾ ಕಾರ್ಖಾನೆಗಳನ್ನು ಸ್ಥಾಪಿಸುವ ಸಾಮರ್ಥ್ಯ ಹೊಂದಿರುವುದು ಎಂದರ್ಥವಲ್ಲ. ಸ್ವಾತಂತ್ರ್ಯ ಎಂಬುದರ ಅರ್ಥವೇನೆಂದರೆ ಆತ್ಮದ ಔದಾರ್ಯ ಮತ್ತು ಮನುಷ್ಯರನ್ನು ಸ್ವತಂತ್ರರನ್ನಾಗಿಸುವುದು. ಇದರಿಂದ ರಾಷ್ಟ್ರವು ಅದರ ವ್ಯಕ್ತಿಗಳಿಗೆ ಅವರ ಅಭಿವ್ಯಕ್ತಿಗಳಿಗೆ ಪಾವಿತ್ರ್ಯತೆ ನೀಡುವುದು. ಹಸಿದವರ ಮುಂದೆ ತತ್ವವನ್ನು ಬೋಧಿಸುವುದು ಅಪಹಾಸ್ಯವಾಗುತ್ತದೆ.





Get Printed Study Notes for UPSC Exams - www.iasexamportal.com/notes

ಇಂಡಿಯಾ ಒಂದು ಹೊಸ ರಾಷ್ಟ್ರವಲ್ಲ, ಇಂಡಿಯಾದ ಸಂಸ್ಕೃತಿ ಯಾವ ಭಾಷೆಯಿಂದ ವಿಕಾಸಗೊಂಡಿತೋ ಆ ಭಾಷೆ ಪ್ರಪಂಚದ ಭಾಷೆಗಳಲ್ಲಿಯೇ ಅತ್ಯಂತ ಹಳೆಯದು. ಇಂಡಿಯಾದ ಯಾವ ಪುಸ್ತಕವನ್ನು ಅತ್ಯಂತ ಹಳೆಯ ಪುಸ್ತಕವೆಂದು ಪರಿಗಣಿಸಲಾಗಿದೆಯೋ ಅದನ್ನು ಇಡೀ ಮಾನವ ಕುಲದ ಅತ್ಯಂತ ಪ್ರಾಚೀನ ಪುಸ್ತಕವೆಂದು ನೋಡಲಾಗಿದೆ. ಅನೇಕ ವಿದೇಶಿ ಆಕ್ರಮಣಗಳು ನಡೆದಾಗ್ಯೂ ಇಂಡಿಯಾ ಅದರ ಪ್ರಾಚೀನ ಸಂಸ್ಕೃತಿಯಿಂದ ಹಿಂದೆ ಸರಿಯಲಿಲ್ಲ, ಆಧುನಿಕ ತಾಂತ್ರಿಕ ಮತ್ತು ವೈಜ್ಞಾನಿಕ ಸಂಸ್ಕೃತಿಗಳೂ ಕೂಡ ಇಂಡಿಯಾವನ್ನು ಅದರ ಪ್ರಾಚೀನತೆಯ ಒಲಿವಿನಿಂದ ಕದ್ದೊಯ್ಯಲು ಸಾಧ್ಯವಾಗಲಿಲ್ಲ. ಕಳೆದ 250 ವರ್ಷಗಳಿಂದ ನಮಗೆ ಏನನ್ನು ನೀಡಿದ್ದಾರೋ ಅದೇ ಸತ್ಯವಲ್ಲ, ಆದರೆ ಕಳೆದ 6000 ವರ್ಷಗಳಿಂದ ಅಭಿವೃದ್ಧಿಹೊಂದಿರುವ ಜ್ಞಾನದ ಅಂಶಗಳು ಕೂಡ ಸತ್ಯ ವಸ್ತುಶಃ ಪ್ರಗತಿಯಿಂದ ಕೂಡಿದ ಆಧುನಿಕ ಯುಗವನ್ನೇ ಇಂಡಿಯಾ ಬಯಸುವುದಿಲ್ಲ ಬದಲು ಪ್ರಾಚೀನ ದಿನಗಳಲ್ಲಿನ ನೈತಿಕತೆ ಮತ್ತು ಆತ್ಮಗಳ ಭ್ರಷ್ಟತೆಯನ್ನು ಪಾಪ ಎಂಬುದನ್ನೂ ಬಯಸುತ್ತದೆ.

ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ತಂತ್ರಜ್ಞಾನದ ಉಗಮದಿಂದಲೂ ಪ್ರಾಚೀನ ಮೌಲ್ಯಗಳು ಮತ್ತು ಆಧುನಿಕತೆಗಳ ನಡುವಿನ ಸಂಘರ್ಷ ಇದ್ದೇ ಇದೆ. ಇಂದು ಅನೇಕ ರಾಷ್ಟ್ರಗಳಲ್ಲಿ ಪ್ರಾಚೀನತೆಯನ್ನು ಆಧುನಿಕತೆ ಹಿಂದಿಕ್ಕಿ ಜಯಶಾಲಿಯಾಗಿದೆ. ಇಂಡಿಯಾ ಒಂದೇ ದೀರ್ಘಕಾಲದಿಂದಲೂ ಆಧುನಿಕತೆಯೊಂದಿಗೆ ಪ್ರಾಚೀನತೆಯು ಹೋರಾಡುತ್ತಾ ಬಂದಿದೆ. ಆದರೆ ಇಂಡಿಯಾದಲ್ಲಿನ ಪ್ರಾಚೀನ ಜ್ಞಾನವು ದುರ್ಬಲವೂ ಆಗಲಿಲ್ಲ, ಹಳೆಯದೂ ಆಗಲಿಲ್ಲ. ಇಂಡಿಯಾದ ಪ್ರಾಚೀನ ಜ್ಞಾನವು ಸದಾಕಾಲ ಹೊಸತರೊಂದಿಗೆ ಮುನ್ನಡೆಯುತ್ತಿದೆ. ಹಾಗೂ ಭವಿಷ್ಯದೆಡೆಗೆ ಸಾಗಿದೆ. ಇಂಡಿಯಾ ಯಾವಾಗಲೂ ಅದರ ದಾರಿಯಲ್ಲಿ ಪ್ರಗತಿ ಸಾಧಿಸಿದೆ. ಹಿರಿಯ ವ್ಯಕ್ತಿಗಳಾದ ರಾಮಕೃಷ್ಣ, ವಿವೇಕಾನಂದ, ತಿಲಕ್, ಅರಬಿಂದೋ ಇವರೆಲ್ಲರೂ ಪ್ರಾಚೀನ ಜ್ಞಾನದ ಪರವಾಗಿದ್ದರು ಮತ್ತು ಪ್ರಾಚೀನ ಜ್ಞಾನವನ್ನು ಪ್ರಸ್ತುತತೆಯೊಂದಿಗೆ ಮಿಳಿತಗೊಳಿಸಿ ಭವಿಷ್ಯದೆಡೆಗೆ ಸಾಗುವ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಪ್ರಾಚೀನ ಮೌಲ್ಯಗಳನ್ನು ಮೊದಲು ಗುರುತಿಸಿದ್ದು ಮಹಾತ್ಮಗಾಂಧಿ. ಆಚಾರ್ಯ ವಿನೋಬಾಭಾವೆಯವರೂ ಪ್ರಾಚೀನ ಕನ್ನಡಿಯೊಳಗಿಂದ ಪ್ರಸ್ತುತ ಕಾಲ ಮತ್ತು ಭವಿಷ್ಯವನ್ನು ನೋಡಿದರು. ಆಧುನಿಕ ವ್ಯಕ್ತಿಯಾಗಿದ್ದರೂ ರವೀಂದ್ರನಾಥಠಾಗೂರರು ಪ್ರಾಚೀನ ಜ್ಞಾನದ ಪ್ರತಿಪಾದಕರಾಗಿದ್ದರು. ಇವತ್ತಿನ ದಿನವೂ ನಾವು ನಮ್ಮ ಪ್ರಾಚೀನತೆಯನ್ನು ಬಿಟ್ಟುಕೊಡಲಿಲ್ಲ, ಪ್ರಾಚೀನತೆಯೇ ನಮ್ಮ, ಅತ್ಯಂತ ಪವಿತ್ರವಾದ ಪರಂಪರೆ. (349 ಶಬ್ದ)



Download FREE UPSC E-BOOKS FREE! CLICK HERE

Get Printed Study Notes for UPSC Exams - www.iasexamportal.com/notes

**Q4.** **ಕೆಳಕಂಡ ಪಠ್ಯವನ್ನು ಇಂಗ್ಲೀಷಿಗೆ ಅನುವಾದಿಸಿ :** ***20***

ಇದೊಂದು ಜೀವಿತಸತ್ಯ, ನೀವು ನಡೆಯುವಾಗ ಎಚ್ಚರವಾಗಿಲ್ಲದಿದ್ದರೆ, ನೀವು ಯಾವುದಾದರೂ ಗುಂಡಿ ಅಥವಾ ಕೆಸರಿನಗುಣಿಯಲ್ಲಿ ಬೀಳಬಹುದು. ವೈಜ್ಞಾನಿಕ ಪ್ರಗತಿಯಲ್ಲಿಯೂ ಇದು ಸತ್ಯ, ನಾವು ವಿಜ್ಞಾನವನ್ನು ಮಾನವನ ಉಪಯೋಗಕ್ಕೆ ಮತ್ತು ಪ್ರಗತಿಗೆ ಬಳಸಿಕೊಂಡರೆ, ಅದೊಂದು ವರವಾಗುತ್ತದೆ, ಅಂತಹ ವೈಜ್ಞಾನಿಕ ಉಪಯುಕ್ತತೆಯನ್ನು ಯಾರೂ ನಿರಾಕರಿಸುವಂತಿಲ್ಲ. ಆದರೆ ವಿಜ್ಞಾನವನ್ನು ವಿನಾಶದ ಉಪಯೋಗಕ್ಕೆ ಬಳಸಿದರೆ ನಿಸ್ಸಂಶಯವಾಗಿ ಅದು ತೊಂದರೆಗೆ ಈಡುಮಾಡಿಕೊಡುತ್ತದೆ. ಮತ್ತು ಮಾನವ ಕುಲಕ್ಕೆ ಒಂದು ಶಾಪವಾಗಿ ಪರಿಣಮಿಸುತ್ತದೆ. ವಿಜ್ಞಾನವು ಲೌಖಿಕ ಸವಲತ್ತು, ಮತ್ತು ಸುಖವನ್ನು ನೀಡಿದರೂ ಅದರ ವಿನಾಶಕಾರಿಶಕ್ತಿಯಿಂದ ಮನಶ್ಯಾಂತಿ ಮತ್ತು ಸಂತೋಷ ನೀಡುವಲ್ಲಿ ಯಶಸ್ವಿಯಾಗುವುದಿಲ್ಲ. ಲೆಖಿಕ ಪ್ರಗತಿಯಿಂದ ಮಾನವ ಜೀವ ಯಾಂತ್ರಿಕ ಮತ್ತು ಬಿಡುವಲ್ಲದಂತಾಗಿದೆ. ಅದರಿಂದ ವೈಜ್ಞಾನಿಕ ಅಭಿವೃದ್ಧಿಯು ಮಾನವನನ್ನು ಆಂತರಿಕ ಶಾಂತಿ ಮತ್ತು ಸಂತೋಷಗಳಿಂದ ವಂಚಿತರನ್ನಾಗಿಸಿದೆ. ನೈತಿಕ ಮೌಲ್ಯಗಳು ಮತ್ತು ಮಾನವೀಯ ಗುಣಗಳು ಕೊಳತುಹೋಗಿವೆ. ಇವೆಲ್ಲರಿಂದಲೂ ವಿಜ್ಞಾನವನ್ನು ದುರುಪಯೋಗಪಡಿಸಿಕೊಂಡು ಅವರನ್ನೇ ದೊಡ್ಡ ಅಪಾಯದೆಡೆಗೆ ದೂಡಿಕೊಂಡಿದ್ದಾರೆ. ಭಯಂಕರ ಪರಿಣಾಮಕಾರಿ ಆಯುಧಗಳೂ ಇಂತಹ ವೈಜ್ಞಾನಿಕ ಅನ್ವೇಷಣೆಗಳ ಫಲಿತಾಂಶ.

ಮನುಷ್ಯ ಮಾನವಕೇಂದ್ರೀಕೃತ ವ್ಯಕ್ತಿತ್ವ ಬಿಟ್ಟು ವಿಜ್ಞಾನದ ಪ್ರಗತಿಪರ ಗುಣವನ್ನು ಮಾನವತೆಯ ಉಪಯೋಗಕ್ಕಾಗಿ ಬಳಸಿದರೆ ನಿಸ್ಸಂಶಯವಾಗಿ ವಿಜ್ಞಾನವು ಮಾನವನ ಪ್ರಗತಿ ಮತ್ತು ಜೀವನ ಕಲ್ಯಾಣಕ್ಕೆ ಉಪಯುಕ್ತವಾಗುತ್ತದೆ.





Get Printed Study Notes for UPSC Exams - www.iasexamportal.com/notes

**Q5.** **ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ :** *20*

One of India's greatest musicians was M.S. Subbulakshmi, affectionately known to most people as 'MS'. Her singing brought joy to millions of people not only in all parts of our country, but in other countries around the world as well. In October 1966, MS was invited to sing in the great hall of the General Assembly of the United Nations in New York, while representatives of all the member countries listened. This was one of the greatest honours ever given to any musician. For several hours MS kept that international audience spellbound with the beauty of her voice and her style of singing; when the concert was over, the entire audience stood up and clapped as a sign of their appreciation of not only the singer but of the great music that she had carried with her from an ancient land. India could not have had a better ambassador. MS was the first musician ever to be awarded the 'Bharat Ratna', India's highest civilian honour. She was the first Indian musician to receive the Ramon Magsaysay Award in 1974 with the citation reading "exacting purists acknowledge Shrimati M.S. Subbulakshmi as the leading exponent of classical and semi-classical songs in the Carnatic tradition of South India".

**Q6.** **(a)** **ಕೆಳಗಿನ ಪದಗಳನ್ನು ಕನ್ನಡದಲ್ಲಿ ಹೇಳಿ :** *2×5=10*

(i) ಅಮಾವಾಸ್ಯೆ *2*

(ii) ಅಕ್ಷರ *2*

(iii) ಗ್ರಹಣ *2*

(iv) ರಾಕ್ಷಸ *2*

(v) ಧ್ವನಿ *2*





Get Printed Study Notes for UPSC Exams - www.iasexamportal.com/notes

**(b)** **ಕೆಳಗಿನ ಪದಗಳನ್ನು ಒಡೆದು ಸಂಧಿರೂಪ ತಿಳಿಸಿ :** ***2×5=10***

(i) ಸುರೇಂದ್ರ *2*

(ii) ಚಂದ್ರೋದಯ *2*

(iii) ದೇವರ್ಷಿ *2*

(iv) ಐಕ್ಯೈಕ *2*

(v) ಕಂಬನಿ *2*

**(c)** **ಛಂದಸ್ಸಿನ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ :** ***2×5=10***

(i) ವಾರ್ಧಕ ಷಟ್ಪದಿಯ ಮಾತ್ರೆಗಳ ವಿವರ ಕೊಡಿ. *2*

(ii) ಆದಿಪ್ರಾಸ ಎಂದರೇನು ? *2*

(iii) ಕಂದಪದ್ಯ ಎಂದರೇನು ? *2*

(iv) ಕಥನ ಕವನ ಎಂದರೇನು ? *2*

(v) ಲಲಿತ ರಗಳೆ ಎಂದರೇನು ? *2*

**(d)** **ಕೆಳಕಂಡ ಪದಗಳ ಪರ್ಯಾಯ ಸಮಾನಾರ್ಥ ಪದಗಳನ್ನು ಹೇಳಿ :** ***2×5=10***

(i) ನಯನ *2*

(ii) ಉರಗ *2*

(iii) ಅವಸರ *2*

(iv) ವನಜ *2*

(v) ದುರ್ವಾಸನೆ *2*



Download FREE UPSC E-BOOKS FREE! CLICK HERE